ಜನ ಇರುತ್ತಾರೆ. ನಾನು ಕಂಬಿ ಕಟ್ಟಿ ಸರಿ ಮಾಡುತ್ತೇನೆ, ಈಗ ಶಸ್ತ್ರಾಸ್ತ್ರಗಳು ತರಿಸುವೆ. ಸ್ವಲ್ಪ ರೆಸ್ಟ್ ಮಾಡಿ' ಎಂದು ಅರಿವಳಿಕೆ ಚುಚ್ಚುಮದ್ದು ಕೊಟ್ಟರು. ಬಹುಶಃ ಕಲಾಸಿಪಾಳ್ಯಂನಿಂದ ಬೈಂಡಿಂಗ್ ವೈರ್, ಕಟಿಂಗ್ ಪ್ಲೇಯರ್ ತರಿಸಬಹುದು ಎಂದುಕೊಂಡೆ.

ವೈದ್ಯರು ಬಹು ಶ್ರದ್ಧೆಯಿಂದ ಹಲ್ಲುಗಳನ್ನು ಟೈಟ್ ಮಾಡಿದಾಗ ಅಲುಗಾಡುತ್ತಿದ್ದ ಹಲ್ಲುಗಳು ತೆಪ್ಪಗಾಗಿದ್ದವು. 'ಮುಂದಿನ ಹಲ್ಲುಗಳಲ್ಲಿ 3 ವಾರ ಬಾಳೆಹಣ್ಣು ಸಹ ಕಡಿಯುವಂತಿಲ್ಲ' ಎಂದು ಎಚ್ಚರಿಸಿದರು. ಮನೆಗೆ ಸುಸ್ತಾಗಿ ಬಂದೆ. ಪೆಟ್ಟಿನಿಂದ ತಪ್ಪಿಸಿಕೊಂಡ ನನ್ನ ತಲೆಯನ್ನು ನಾನೇ ಶ್ಲಾಘಿಸಿದೆ.

ಇಲ್ಲಿಂದ ಆಚೆಗೆ ನನ್ನ ಸ್ಥಿತಿ ಗೊಂದಲಮಯವಾಯಿತು. ನಾ ಬಿದ್ದ ವಿಷಯ ಡುಂಡಿರಾಜ್ ಅವರಿಗೆ ತಿಳಿಸಿ ಮರುದಿನದ ಭಾಷಣಕ್ಕೆ ಬರಲಾಗದ ನನ್ನ ಸ್ಥಿತಿ ತಿಳಿಸಿದೆ. ಅವರು ಅದನ್ನು ಫೇಸ್‌ಬುಕ್ಕಲ್ಲಿ ಹಾಕಿದರು. ಸಂತಾಪ ಸೂಚಕ ಮೆಸೇಜುಗಳ ಸುರಿಮಳೆ ! ರಪರಪನೆ ಬರುತ್ತಿದ್ದ ಮೆಸೇಜುಗಳನ್ನು ಕಂಡು ನಾನು ತತ್ತರಿಸಿ ಹೋದೆ. ಕೆಲವರು ನನ್ನ ಬಗ್ಗೆ ಪದ್ಯಗಳನ್ನು ಬರೆದಿದ್ದರು. ನಮ್ಮ ಬ್ಯಾಂಕ್‌ನ ಮನೋಹರ ಗೋಖಲೆಯವರು ಸೊಗಸಾದ ಕವನವನ್ನು ರಚಿಸಿ ಆನಂದದಿಂದ 'ಲಲಲಾ' ಎಂದು ಹಾಡಿದ ಧ್ವನಿಮುದ್ರಣ ಕಳಿಸಿದ್ದರು.

ಇನ್ನು ಬ್ಯಾಂಕಿನ ಬಿ.ಎಸ್.ರವೀಂದ್ರ ಅವರು ನಾನು ಬಿದ್ದಿದ್ದನ್ನು ಸ್ಟೇಟ್ ಲೆವೆಲ್ ನ್ಯೂಸ್ ಮಾಡುವಂತೆ:

ನೋವಿನಲ್ಲಿ ನಗೆಯ ಚೆಲ್ಲಿ
ಮಲಗಿದಲ್ಲಿ ನಗೆಯ ಜಾಕಿ
ಮರುಗಿ ಕರ್ನಾಟವಿಲ್ಲಿ
ಹರಸುವುದು ಸುಧಾರಿಸಿಕೊಳ್ಳಿ

ಎಂದು ಪದ್ಯ ರಚಿಸಿ ತಮ್ಮ ಮುಂದಿನ ಸಂಕಲನದಲ್ಲಿ ಆ ಪದ್ಯ ಅಳವಡಿಸಿಕೊಳ್ಳಲು 'ಎಮ್ಮೆಸ್ಸೆನ್ ಬಿದ್ದಾಗ' ಎಂಬ ಶೀರ್ಷಿಕೆ ಕೊಟ್ಟು ಭದ್ರ ಪಡಿಸಿದರು.

ಲೇಖಕಿ ಶಾಂತಾ ನಾಗಮಂಗಲ ಅವರು ನೈಜ ಕಳಕಳಿಯ ಮೆಸೇಜುಗಳು ಕಳಿಸಿ 'ನೀವು ನೀರಲ್ಲಿ ಬೀಳಿ, ಸಮುದ್ರದಲ್ಲಿ ಬೀಳಿ, ಹಾಸಿಗೆಯ ಮೇಲೆ ಬೀಳಿ. ಆದರೆ, ರಸ್ತೆಯಲ್ಲಿ ಬಿದ್ದರೆ ತುಂಬಾ ತೊಂದರೆಯಾಗುತ್ತದೆ' ಎಂದು ಸಂಸ್ಕೃತ ಶ್ಲೋಕ ಹೇಳಿ 'ವಿಶ್ರಾಂತಿ ತೆಗೆದುಕೊಳ್ಳಿ' ಎಂದು ಕಿವಿಮಾತು ಹೇಳಿದರು. ಫೋಟೋಗ್ರಾಫರ್ ವೆಂಕಿಯವರು ತಲೆಗೆ ಹೆಲ್ಮೆಟ್ ಹಾಕಿಕೊಂಡು ವಾಕಿಂಗ್ ಮಾಡಿ ಸಾರ್, ಎಲ್ಲಿ ಬಿದ್ದರೂ ತೊಂದರೆ ಇರೊಲ್ಲ' ಎಂದು ಸಲಹೆ ಕೊಟ್ಟರು.

ಸಂದರ್ಶನದ ಎಕ್ಸ್‌ಪರ್ಟ್ ಆದ ಮಿತ್ರರು ಬಂದರು. ಏನಾಯಿತು, ಹ್ಯಾಗಾಯಿತು ಎಂಬ ಸಾಲು ಸಾಲು ಪ್ರಶ್ನೆಗಳು. 'ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ' ಎಂದು ನಾನು ಭಾಷಣದಲ್ಲಿ ಆಗಾಗ ಹೇಳುತ್ತಿದ್ದೆ. ಅದು ಕಾರ್ಯರೂಪಕ್ಕೆ ಬಂತು. ಮಣಿಪಾಲ್ ಆಸ್ಪತ್ರೆಯಲ್ಲಿ ನನ್ನ ಒಳ ತುಟಿಗೆ ಸಾಕಷ್ಟು ಹೊಲಿಗೆ ಹಾಕಿ ಕಳಿಸಿದ್ದಾರೆ. ಹೊಲಿಗೆ ಅಲ್ಲ, ಅದು ಎಂಬ್ರಾಯಿಡರಿ' ಎಂದೆ.

'ಇನ್ನೇನು ಹೇಳಿದರು ವೈದ್ಯರು?' ಎಂದು ಕೇಳಿದರು.

'ಆರು ದಿನಕ್ಕೆ ಮಾತ್ರೆಗಳು ಬರೆದರು. ಮೂರು ದಿನ ಮಡದಿಯ ಜೊತೆಯಲ್ಲಿ ಮಾತಾಡಬೇಡ' ಎಂದು ಮುನ್ನೆಚ್ಚರಿಕೆ ಕೊಟ್ಟಿದ್ದಾರೆ.

'ಹಲ್ಲುಗಳು ಜಖಂ ಆಗಲು ಏನು ಕಾರಣ ?' ಎಂದು ಗೆಳೆಯ ಕೇಳಿದ.

'ನಾನು ರಾಘವಾಂಕನ ಹಲ್ಲು ಮುರಿದ ಬಗ್ಗೆ ಆಗಾಗ ಭಾಷಣ ಮಾಡುತ್ತಿದ್ದೆ. ಅದರ ಎಫೆಕ್ಟ್‌ನಿಂದ ನನ್ನ ಹಲ್ಲು ಮುರಿದಿರಬಹುದು' ಎಂದೆ.

ಚಾನಲ್ ಒಂದರ ಮುಖ್ಯಸ್ಥರಾದ ಭುವನ್ ಅವರು ಮನೆಗೆ ಎಳನೀರು ತಂದು ಧೈರ್ಯ ಹೇಳಿದರು. 'ನಿಮ್ಮ ಬುರುಡೆ ಮಾತು ನೆನಪಾಯಿತು. ಅದಕ್ಕೆ ಎಳನೀರು ಬುರುಡೆ ತಂದೆ' ಎಂದು ವಿಪರೀತ ನಗಿಸಿ 'ನಗಬೇಡಿ' ಎಂದು ಎಚ್ಚರಿಸಿದರು.

ಬ್ಯಾಂಕ್ ಚೇರ್‌ಮನ್ ಆಗಿದ್ದ ಎಸ್.ಗುಂಡೂರಾಯರು ಹತ್ತಾರು ಮಂದಿಯನ್ನು ಕರೆದುಕೊಂಡು ಬಂದು ನನ್ನ ಆರೋಗ್ಯದ ಬಗ್ಗೆ ವಿಚಾರಿಸಿ 'ನಿಮ್ಮ ಮೂವ್‌ಮೆಂಟ್ಸ್ ಎಲ್ಲಾ ನನಗೆ ತಿಳಿಸ್ತಿದ್ರಿ. ಆದರೆ, ಈ ಸಲ ರಸ್ತೇಲಿ ಬೀಳೋ ಪ್ರೋಗ್ರಾಂ ಇದೆ ಅಂತ ಒಂದು ಮಾತು ನಂಗೆ ತಿಳಿಸಿದ್ರೆ ನಾನೂ ಬರ್ತಿದ್ದೆ' ಎಂದು ಬೇಸರ ವ್ಯಕ್ತಪಡಿಸಿದರು. ಜಾಣಜಾಣೆಯರ ಉದಯ್, 'ಬಿದ್ದ ಜಾಗದಲ್ಲಿರುವ ಸಿ.ಸಿ. ಕ್ಯಾಮರಾ ಪರಿಶೀಲಿಸಲು ಪೊಲೀಸ್‌ಗೆ ತಿಳಿಸಲಾ ? ನಿಮ್ಮ ಭಾಷಣ ಕೆಲವರನ್ನು ಕೆರಳಿಸಿರಬಹುದು, ಇದರ ಹಿಂದೆ ಯಾರದೋ ಕೈವಾಡ ಇರಬಹುದು' ಎಂದು ಅನುಮಾನಿಸಿದರು.

ಅಮೆರಿಕಾದಿಂದ ಫೋನ್ ಬಂತು. 'ನ್ಯೂ